ರಾಜ್ಯದಲ್ಲಿ ಐ.ಐ.ಟಿ ಸ್ಥಾಪನೆ

2476(2577); ಶ್ರೀ ಗೋಪಾಲಯ್ಯ ಕೆ.

ಅ) ರಾಜ್ಯದಲ್ಲಿ ಹೊಸದಾಗಿ ಇಂಡಿಯನ್ ಇನ್ಸ್‌ಟ್ಯೂಟ್ ಆಫ್ ಟೆಕ್ನಾಲಜಿಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಮಂಜೂರು ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ ಎಲ್ಲಿ ಸ್ಥಾಪಿಸಲಾಗುವುದು ಹಾಗೂ ಯಾವಾಗ ಪ್ರಾರಂಭಿಸಲಾಗುವುದು;

ಇ) ಇಲ್ಲಿಯವರೆಗೆ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು;

ಈ) ಇದರಿಂದ ರಾಜ್ಯ ಸರ್ಕಾರಕ್ಕೆ ಆರ್ಥಿಕ ಹೊರೆಯಾಗುವುದೇ ಹಾಗೂ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಸ್ಥಾಪನೆಗೆ ನೀಡಬೇಕಾದ ಸೌಲಭ್ಯಗಳೇನು?

ಶ್ರೀ ಆರ್.ವಿ. ದೇಶ್‌ಪಾಂಡೆ (ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು)

ಅ) ಹೌದು.

ಆ) ಕೇಂದ್ರ ಸರ್ಕಾರವು ಆಪೇಕ್ಷಿಸಿರುವ ಮಾಹಿತಿಯನ್ನು ರಾಯಚೂರು, ಧಾರವಾಡ ಹಾಗೂ ಮೈಸೂರು ಜಿಲ್ಲಾಧಿಕಾರಿಗಳಿಂದ ಪಡೆಯಲಾಗಿದ್ದು, ಸದರಿ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು. ಕೇಂದ್ರ ಸರ್ಕಾರವು ಸದರಿ ಮಾಹಿತಿಯನ್ನು ಪರಿಶೀಲಿಸಿ ರಾಜ್ಯದ ಯಾವ ಜಿಲ್ಲೆಯಲ್ಲಿ ಐಐಟಿಯನ್ನು ಪ್ರಾರಂಭಿಸಬೇಕು ಹಾಗೂ ಯಾವಾಗ ಪ್ರಾರಂಬಿಸಬೇಕು ಎಂಬ ಬಗ್ಗೆ ಕೇಂದ್ರ ಸರ್ಕಾರ ತೆಗೆದುಕೊಳ್ಳುವ ಅಂತಿಮ ನಿರ್ಧಾರದ ಮೇಲೆ ಅವಲಂಬಿತವಾಗಿದೆ.

ಇ) ರಾಜ್ಯದಲ್ಲಿ ಐಐಟಿ ಸ್ಥಾಪಿಸುವ ಬಗೆಗೆ ಕೇಂದ್ರ ಸರ್ಕಾರ ಅಪೇಕ್ಷಿಸಿದ ಮಾಹಿತಿಯನ್ನು ರಾಯಚೂರು, ಧಾರವಾಡ ಹಾಗೂ ಮೈಸೂರು ಜಿಲ್ಲಾಧಿಕಾರಿಗಳಿಂದ ಪಡೆಯಲಾಗಿದ್ದು, ಈ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಐಐಟಿ ಸ್ಥಾಪನೆಯ ವೆಚ್ಚದ ಬಗ್ಗೆ ಕೇಂದ್ರ ಸರ್ಕಾರ ತೆಗೆದುಕೊಳ್ಳುವ ನಿರ್ಧಾರದ ಮೇಲೆ ಅವಲಂಬಿತವಾಗಿದೆ.

ಐಐಟಿ ಸಂಸ್ಥೆಯನ್ನು ಸ್ಥಾಪಿಸುವ ಸಲುವಾಗಿ ಕನಿಷ್ಟವಾಗಿ ಕನಿಷ್ಟ 500 ರಿಂದ 600 ಎಕರೆ ಜಮೀನು ಹಾಗೂ ಇನ್ನಿತರೆ ಅವಶ್ಯಕ ಮೂಲಭೂತ ಸೌಕರ್ಯಗಳೊಂದಿಗೆ ತಾತ್ಕಾಲಿಕ ಕ್ಯಾಂಪಸ್‌ನ ಸಲುವಾಗಿ ಕನಿಷ್ಟ 40,000 ಚದರ ಅಡಿಗಳನ್ನು ಹೊಂದಿರುವ ಶೈಕ್ಷಣಿಕ ಜಾಗ, 750 ವಿದ್ಯಾರ್ಥಿಗಳನ್ನು ಹೊಂದುವ ಸಾಮರ್ಥ್ಯವುಳ್ಳ ಹಾಸ್ಟೆಲ್ ಕಟ್ಟಡ ಮತ್ತು ಬೋಧಕ ವೃಂದದವರಿಗಾಗಿ ಸುಮಾರು 50 ಮನೆಗಳು (ಪ್ರತಿಯೊಂದು 1000 ದಿಂದ 1500 ಚದರ ಅಡಿ) ಇರುವ ಸೂಕ್ತ ಜಾಗವನ್ನು ಒದಗಿಸಬೇಕಾಗಿರುತ್ತದೆ.

ಉತ್ತರ ಕರ್ನಾಟಕದಲ್ಲಿ ಶಿಶು ಮರಣ ಪ್ರಮಾಣ ಹೆಚ್ಚಾಗಿರುವುದು

2477(2129); ಶ್ರೀ ಗೋವಿಂದ ಎಂ. ಕಾರಜೋಳ

ಅ) ಉತ್ತರ ಕರ್ನಾಟಕ ಭಾಗದಲ್ಲಿ ಶಿಶು ಮರಣ ಪ್ರಮಾಣ ಹೆಚ್ಚಳವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಮೃತಪಟ್ಟಿರುವ ಶಿಶುಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು).

ಆ) ಈ ಭಾಗದಲ್ಲಿ ಶಿಶು ಮರಣ ಪ್ರಮಾಣ ಹೆಚ್ಚಾಗಲು ಕಾರಣವೇನು; ಸರ್ಕಾರದ ಪರಿಶೀಲನೆ ನಡೆಸಿದೆಯೇ;